
# ಕಲ್ವಾರಿ ಶಿಲುಬೆಯ ರಹಸ್ಯ

ಭಾಗ- 2

## ಅಧ್ಯಯನ # 3



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 3

# ಕಲ್ವಾರಿ ಶಿಲುಬೆಯ ರಹಸ್ಯ ಭಾಗ-2

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ನಾವು ಕಳೆದ ತರಗತಿಯಲ್ಲಿ **“ಕಲ್ವಾರಿ ಶಿಲುಬೆಯ ರಹಸ್ಯ”** ವನ್ನು ಮತ್ತು ಯೇಸು ಹೇಳಿದ

**“ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು”**


**ಯೋಹಾನ 12:32** ಎಂಬ ವಾಕ್ಯವು **ಸರಿ ಸಮಾನ ಬೆಲೆಯಾದ ಈಡುಬಲಿಯನ್ನು** ಸೂಚಿಸುತ್ತದೆ ಎಂದು ನೋಡಿದೆವು.

ಹಾಗೂ ಯೇಸು ಇದನ್ನು ಕೊಡುವುದಕ್ಕಾಗಿಯೇ ಬಂದನೆಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ.

**ಮಾರ್ಕನು 10 : 45**

“ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು ಎಂದು ಹೇಳಿದನು ”

ಇಲ್ಲಿ ಅನೇಕರು ಎಂಬ ಪದದ ಅರ್ಥವು ಈ ಲೋಕದ **ಇಡೀ** ಮಾನವ ಕುಲವನ್ನು ಸೂಚಿಸುತ್ತದೆಂದು ನಾವು ಸ್ಪಷ್ಟವಾಗಿ ನೋಡಿದೆವು.



## 1 ತಿಮೊಥೆಯನಿಗೆ 2 : 5-6

"ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು."

**ಹೌದು! ಈ ಈಡು ಅಥವಾ ಸರಿಸಮಾನವಾದ ಬೆಲೆ ಒಬ್ಬ ಮನುಷ್ಯ ಆದಾಮನಿಗೆ ನೀಡಲಾಯಿತು. ಆತನ ಮೂಲಕ ಲೋಕದ ಎಲ್ಲಾ ಜನರು ಮರಣದಂಡನೆಯನ್ನು ಹೊಂದಿದರು!!**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ನೋಡುತ್ತೇವೆ–

## 1 ಕೊರಿಂಥದವರಿಗೆ 15 : 21,22

"ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು"

ಹೌದು! ಕಳೆದ ತರಗತಿಯಲ್ಲಿ ಯೇಸುವಿನ **ಈಡುಬಲಿಯ ಬೆಲೆ**ಯನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿದೆವು ಆದರೆ, ಇಂದು ಅದರ ಪರಿಣಾಮಗಳನ್ನು ಅಥವ **ಈಡುಬಲಿಯ ಕೆಲಸವನ್ನು** ಅಭ್ಯಾಸಮಾಡೋಣ.

ಹೌದು! ಒಬ್ಬ ಮನುಷ್ಯನಾದ ಆದಾಮನ ಮೂಲಕ ಇಡೀ ಮಾನವ ಕುಲವೇ ಮರಣ ದಂಡನೆಗೆ ಒಳಗಾಯಿತು.

ಆದರೆ "ಎರಡನೆ ಆದಾಮ" –

ಅಚೆದರೆ **ಎರಡನೆ ಪರಿಪೂರ್ಣ ಮನುಷ್ಯ**ನ ತ್ಯಾಗಬಲಿಯಿಂದ ಎಲ್ಲಾ ಮಾನವ ಕುಲವು **ಈಗ** ಮರಣದಿಂದ ಬಿಡುಗಡೆ ಹೊಂದಿದೆ ಮತ್ತು ಜೀವವನ್ನು ಹೊಂದಲು ಅಧಿಕಾರ ಹೊಂದಿದೆಯೆಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ–

"....ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು..."


**ಇದನ್ನು ಒಂದಕ್ಕೆ ಒಂದು ಸಿದ್ಧಾಂತ ಎಂದು ಕರೆಯಲಾಗುತ್ತದೆ.**

ಈ ಸಿದ್ಧಾಂತ ಹೇಗೆ ಕೆಲಸ ಮಾಡುತ್ತದೆಂದು ಕೆಳಗಿನ ವಾಕ್ಯ ಓದಿ ತಿಳಿದುಕೊಳ್ಳೋಣ.

**ಇಬ್ರಿಯರಿಗೆ 7 : 9-10**

"ಇದು ಮಾತ್ರವಲ್ಲದೆ ದಶಮ ಭಾಗಗಳನ್ನು ತಕ್ಕೊಳ್ಳುವ ಲೇವಿಯೂ ಕೂಡ ಅಬ್ರಹಾಮನ ಮೂಲಕ ದಶಮ ಭಾಗಗಳನ್ನು ಕೊಟ್ಟ ಹಾಗಾಯಿತೆಂದು ಹೇಳಬಹುದು. ಹೇಗಂದರೆ ಮೆಲ್ಕಿಜೆದೇಕನು ಲೇವಿಯ ಮೂಲಪುರುಷನನ್ನು ಎದುರುಗೊಂಡಾಗ ಲೇವಿಯು ತತ್ವರೂಪವಾಗಿ ಇವನೊಳಗೆ ಇದ್ದನು."

**ಈ ವಾಕ್ಯದ ಅರ್ಥವೇನು?**



ಲೇವಿಯು ಯಾಕೋಬನ ಹನ್ನೆರಡು ಮಕ್ಕಳಲ್ಲಿ ಒಬ್ಬನು. ಯಾಕೋಬನು ಇಸಾಕನ ಮಗನು ಮತ್ತು ಇಸಾಕನು ಅಬ್ರಹಾಮನ ಮಗನು.

**ಹೌದು! ಲೇವಿಯು ಅಬ್ರಹಾಮನ ಮರಿ ಮೊಮ್ಮಗನು!**

ಲೇವಿಯಲ್ಲಿ ಒಂದು ವಿಶೇಷವಿದೆ! ಅವನು ಲೇವಿಯ ಕುಲದ ತಂದೆಯಾಗಿದ್ದನು. ಅವರು ದೇವದರ್ಶನ ಗುಡಾರದಲ್ಲಿ ದೇವರನ್ನು ಸೇವಿಸುವದಕ್ಕೆ ಆರಿಸಲ್ಪಟ್ಟವರು ಮತ್ತು ಭೂಮಿಯಲ್ಲಿ ಇವರಿಗೆ ಯಾವ ಪಾಲು ಇರಲಿಲ್ಲ.

ಆದ್ದರಿಂದಲೇ ಇವರು "ದಶಮ ಭಾಗ"ವನ್ನು ಅಥವಾ 1/10 ಭಾಗವನ್ನು ಉಳಿದ 11 ಕುಲದಿಂದ **ಪಡೆದುಕೊಳ್ಳುತ್ತಿದ್ದರು**

ಲೇವಿಯು **ದಶಮಭಾಗವನ್ನು ಎಂದಿಗೂ** ಕೊಡುತ್ತಿರಲಿಲ್ಲ ಆದರೆ ಅದನ್ನು ಪಡೆಯುತ್ತಿದ್ದನು!

ಆದರೆ ಇಲ್ಲಿ ಅಪ್ರೋಸ್ತಲನಾದ ಪೌಲನು ಹೇಳುವ ಪ್ರಕಾರ "ಅಬ್ರಹಾಮನು" ಮೆಲ್ಕಿಜೆದೇಕನಿಗೆ "ದಶಮ ಭಾಗ"ವನ್ನು ಕೊಡುತ್ತಾನೆ, ಇಲ್ಲಿ ಇನ್ನೂ ಹುಟ್ಟದೇ ಇರುವ ಲೇವಿ0ಯೂ ಸಹ ತತ್ವರೂಪವಾಗಿ ಅಬ್ರಹಾಮನೊಳಗೆ ಇದ್ದು ದಶಮ ಭಾಗಗಳನ್ನು ಕೊಟ್ಟ ಹಾಗಾಯಿತು!!

**ಇದನ್ನು ಒಂದಕ್ಕೆ ಒಂದು ಸಿದ್ಧಾಂತ ಎಂದು ಕರೆಯಲಾಗುತ್ತದೆ!!**

ಅದೇ ರೀತಿ, ಏದೆನ್ ತೋಟದಲ್ಲಿ ಆದಾಮನು ಪಾಪಮಾಡಿದ್ದರಿಂದ **ಎಲ್ಲಾ ಮನುಷ್ಯರು** ಇನ್ನು ಹುಟ್ಟದೆ ಇದ್ದರೂ ಸಹ, ತತ್ವರೂಪವಾಗಿ ಆದಾಮನೊಳಗೆ ಇದ್ದದರಿಂದ ಎಲ್ಲಾ ಮನುಕುಲವನ್ನು ಪಾಪಿಗಳು ಮತ್ತು ಮರಣದಂಡನೆಯಡಿಯಲ್ಲಿ ಇರುವವರು ಎಂದು ಲೆಕ್ಕಿಸಲಾಗುತ್ತದೆ.

ಆದರೆ ವಿಮೋಚನಾ ಈಡುಬಲಿಯಕ್ರಯವನ್ನು ಆದಾಮನಿಗೆ ಕೊಟ್ಟಿರುವುದರಿಂದ ಆದಾಮನು ಮತ್ತು ಇಡೀ ಮನುಕುಲವು, **ಆದಾಮನ ಮೇಲಿದ್ದ ಮತ್ತು ಇಡೀ ಮನುಕುಲಕ್ಕೆ ವರ್ಗಾವಣೆಯಾಗಿದ್ದ ಅಥವಾ ಪಿತ್ರಾರ್ಜಿತವಾಗಿ ಪಡೆದಿದ್ದ ಮರಣದಂಡನೆಯಿಂದ ಈಗ ಬಿಡುಗಡೆ ಹೊಂದಿದೆ**

ಇದೇ ಎಲ್ಲಾ ಮನುಷ್ಯಕುಲಕ್ಕೆ **ದೇವರ ದೈವೀಕ 0ಯೋಜನೆ,** ಇದನ್ನು ಕುರಿತು ನಾವು ಮುಂದೆ ಓದುತ್ತೇವೆ –

## ರೋಮಾಪುರದವರಿಗೆ 8 : 20,21

"ಜಗತ್ತು ವ್ಯರ್ಥತ್ವಕ್ಕೆ ಒಳಗಾಯಿತು ಹೀಗೆ ಒಳಗಾದದ್ದು ಸ್ವೇಚ್ಛೆಯಿಂದಲ್ಲ, ಅದನ್ನು ಒಳಪಡಿಸಿದವನ ಸಂಕಲ್ಪದಿಂದಲೇ ಆದರೂ ಅದಕ್ಕೊಂದು ನಿರೀಕ್ಷೆಯುಂಟು; ಏನೆಂದರೆ ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆ0ಯಾಗಿ ದೇವರ ಮಕ್ಕಳ ಮಹಿಮೆ0ಯುಳ್ಳ ವಿಮೋಚನೆ0ಯಲ್ಲಿ ಪಾಲುಹೊಂದುವದೇ."

## ಈ ವಾಕ್ಯದ ಅರ್ಥವೇನು ?

ಇಲ್ಲಿ ಉಪ0ಯೋಗಿಸಿರುವ ಭಾಷೆ0ಯು ವಿಚಿತ್ರವಾಗಿ ತೋರಬಹುದು!

ನಾವು ಈ ವಾಕ್ಯವನ್ನು ಮತ್ತೆ ಓದಿ ಅರ್ಥಮಾಡಿಕೊಳ್ಳಲು ಪ್ರ0ಯತ್ನಿಸೋಣ–

## ರೋಮಾಪುರದವರಿಗೆ 8 : 20

"ಜಗತ್ತು ವ್ಯರ್ಥತ್ವಕ್ಕೆ ಒಳಗಾಯಿತು ಹೀಗೆ ಒಳಗಾದದ್ದು ಸ್ವೇಚ್ಛೆಯಿಂದಲ್ಲ, ಅದನ್ನು ಒಳಪಡಿಸಿದವನ ಸಂಕಲ್ಪದಿಂದಲೇ."

ಹೌದು! ಇಲ್ಲಿ "**ಜಗತ್ತು**" ಎಂಬ ಪದವು **ಇಡೀ ಮನುಕುಲವನ್ನು** ಸೂಚಿಸುತ್ತದೆ.
ಈ ಜಗತ್ತು "ವ್ಯರ್ಥತ್ವಕ್ಕೆ ಒಳಗಾಯಿತು."

ಅಥವಾ ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇದು ಪಾಪ ಮತ್ತು ಮರಣದ ಸ್ಥಿತಿ0ಯನ್ನು **ಸ್ವಾಸ್ಥ್ಯವಾಗಿ** ಪಡೆಯಿತು.

ಹೀಗೆ ಒಳಗಾದದ್ದು ಸ್ವೇಚ್ಛೆಯಿಂದಲ್ಲ ಅಂದರೆ **ಪ್ರತಿ0ಯೊಬ್ಬ** ಮನುಷ್ಯನಿಗೆ ಆ0ಯ್ಕೆಕೊಡದೆ ಮತ್ತು ಇದರ ಬಗ್ಗೆ ಅವರ ಬಳಿ ಸಲಹೆ ಕೇಳದೆ ಇದು ಮಾಡಲಾಯಿತು.

ಇದನ್ನು "**ಒಳಪಡಿಸಿದವನ**" ಸಂಕಲ್ಪದಿಂದಲೇ ಅಂದರೆ ದೇವರನ್ನು ಮತ್ತು ಆತನ 0ಯೋಜನೆ0ಯನ್ನು ಕುರಿತು ಹೇಳಲಾಗಿದೆ. ಇದು 0ಯಾವ ಪ್ರಕಾರ "**ಆದಾಮನ ಸಂಬಂಧದಿಂದ ಎಲ್ಲರೂ ಸಾ0ಯುವವರಾದರೋ**"
ಎಂಬ ಕಾಲವನ್ನು ಸೂಚಿಸುತ್ತದೆ.

**ಕೆಲವರು ಹೀಗೆ ಕೇಳಬಹುದು – "ದೇವರು ಹೀಗೆ ಮಾಡುವುದು ಸರಿ0ಯೇ ಅಥವಾ ನ್ಯಾ0ಯವೇ"?**

ಇದು ಹೇಗೆಂದರೆ ಪೋಷಕರು ತಮ್ಮ ಮಕ್ಕಳು ಹುಟ್ಟುವ **ಮುಂಚೆ0ಯೇ** ತಮ್ಮ ಮಕ್ಕಳ **ಶಾಲೆ, ಜೀವನ ವೃತ್ತಿ,** ಮತ್ತು **ತರಬೇತಿ**ಗಳ ಬಗ್ಗೆ ತಮ್ಮ ಮಕ್ಕಳನ್ನು ಕೇಳದೆ0ಯೇ ಯೋಜನೆಗಳನ್ನು ಮಾಡಿದಂತೆ!!

– ಪೋಷಕರು ಇದನ್ನೆಲ್ಲಾ ಒಳ್ಳೆ0ಯ ಉದ್ದೇಶದಿಂದ ಮಾಡುತ್ತಾರೆ.

ಅದೇ ರೀತಿ **ಎಲ್ಲಾ** ಸೃಷ್ಟಿ0ಯ "**ತಂದೆ**" 0ಯಾದ ದೇವರು ಮಾಡಿದರೆಂದು
ನಾವು ಮುಂದೆ ಓದುತ್ತೇವೆ–

**ಎಫೆಸದವರಿಗೆ 3 : 14,15**

"ಹೀಗಿರಲಾಗಿ 0ಯಾವ ತಂದೆಯಿಂದ ಭೂಪರಲೋಕಗಳಲ್ಲಿರುವ ಪ್ರತಿ ಜನವೂ
ಹೆಸರು ತೆಗೆದುಕೊಳ್ಳುತ್ತದೋ
ಆ ತಂದೆ0ಯ ಮುಂದೆ ನಾನು ಮೊಣಕಾಲೂರಿಕೊಂಡು."

ಹೌದು! ದೇವರು ಆತನ ಭೂಲೋಕದ ಮಕ್ಕಳನ್ನು ಕುರಿತು **ಅದ್ಭುತವಾದ ಯೋಜನೆಯನ್ನು ಮಾಡಿದ್ದಾರೆ.**

ಆ ಆದ್ಭುತವಾದ 0ಯೋಜನೆ0ಯನ್ನು ಕುರಿತು ಮುಂದಿನ ವಾಕ್ಯದಲ್ಲಿ ಓದೋಣ –

## ರೋಮಾಪುರದವರಿಗೆ 8 : 21

“ಆದರೂ ಅದಕ್ಕೊಂದು ನಿರೀಕ್ಷೆಯುಂಟು; ಏನೆಂದರೆ ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲು ಹೊಂದುವದೇ.”

ಹೌದು! ಈ **ಬಿಡುಗಡೆಯು** ಕಲ್ವಾರಿ ಶಿಲುಬೆಯ **ಈಡು**ಬಲಿಯ ಮೂಲಕವಾಗಿದೆ !

“ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆ” ಎಂದರೇನು?

**ಈ ರಕ್ಷಣೆಯನ್ನೇ, ಪಾಪ ಮತ್ತು ಮರಣದ ಸ್ಥಿತಿಯಲ್ಲಿರುವ ಇಡೀ ಮಾನವಕುಲಕ್ಕೆ ದೇವರು ಒದಗಿಸುವುದಕ್ಕಿರುವನು.**

**ಇದನ್ನು ಹೇಗೆ ಮಾಡಬೇಕು ?**

ಇದಕ್ಕೆ ಉತ್ತರ ಕೆಳಗಿನ ವಾಕ್ಯದಲ್ಲಿ ಓದೋಣ –

## 1 ತಿಮೊಥೆಯನಿಗೆ 2 : 3,4

“ಹಾಗೆ ಮಾಡುವುದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಗೆಯಾಗಿಯೂ ಯೋಗ್ಯವಾಗಿಯೂ ಅದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಆತನ ಚಿತ್ತವಾಗಿದೆ.”

ಹೌದು! ಇದೇ ಈ ಲೋಕಕ್ಕೆ **ದೇವರ** ಚಿತ್ತ!



**ಇದರ ಅರ್ಥವೇನು?**

ಸಾಮಾನ್ಯವಾಗಿ "ರಕ್ಷಣೆ ಹೊಂದುವದು" ಎಂಬದು "ಪರಲೋಕಕ್ಕೆ ಕರೆದುಕೊಂಡು ಹೋಗುವುದು" ಎಂದು ಎಣಿಸಲಾಗಿದೆ.

ಈಗ ಆ ಅರ್ಥವನ್ನು ಇಲ್ಲಿ ಅನ್ವಯಿಸಿದರೆ, ಈಗಿನ ನೈತಿಕ ಸ್ಥಿತಿಯಲ್ಲಿ ಎಲ್ಲಾ ಜನರನ್ನು ದೇವರ ಪರಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ ಎಂಬುದು ಹಾಸ್ಯಾಸ್ಪದವಾಗಿ ಇರುತ್ತದೆ.

**ಇದಕ್ಕೆ ಬೇರೆ ಅರ್ಥವಿರಬೇಕು!**

ಇದಲ್ಲದೆ, ರಕ್ಷಣೆಯ ಬಗ್ಗೆ ಸಾಮಾನ್ಯ ತಿಳುವಳಿಕೆ ಏನೆಂದರೆ, ಒಬ್ಬನು **ಮೊದಲು** ಸತ್ಯದ ಜ್ಞಾನಕ್ಕೆ ಸೇರಿದ **ನಂತರ** "ರಕ್ಷಣೆ" ಹೊಂದುವವನು ಎಂಬುದು.

## ಆದರೆ ಇಲ್ಲಿ ವಿಷಯವು ವಿರುದ್ಧವಾಗಿದೆ! ಏಕೆ?

ದೇವರ ಚಿತ್ತವೇನೆಂದರೆ

**ಮೊದಲು** "ಎಲ್ಲರೂ ರಕ್ಷಣೆಯನ್ನು ಹೊಂದಬೇಕು"

**ಇದರ ಅರ್ಥವೇನು**?


ಇದು, ಎಲ್ಲಾ ಮನುಷ್ಯರು ಈಗ ಇರುವ ಒಂದು ನಿರ್ದಿಷ್ಟ ಸ್ಥಿತಿಯನ್ನು ಸೂಚಿಸುತ್ತದೆ– ಅದೇನೆಂದರೆ **ಮರಣ**ದಂಡನೆಯ ಸ್ಥಿತಿ!

ಈಡುಬಲಿಯ ಮೂಲಕ ಎಲ್ಲಾ ಮನುಷ್ಯರು ಜೀವಿತರಾಗುವರು ಎಂಬುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### ಅಪೊಸ್ತಲರ ಕೃತ್ಯಗಳು 24 : 15

"ಇದಲ್ಲದೆ ನೀತಿವಂತರಿಗೂ ಅನೀತಿವಂತರಿಗೂ ಪುನರುತ್ಥಾನವಾಗುವದೆಂದು ಇವರು ದೇವರಲ್ಲಿ ನಿರೀಕ್ಷೆಯಿಟ್ಟಿರುವ ಪ್ರಕಾರವೇ ನಾನೂ ನಿರೀಕ್ಷೆಯುಳ್ಳವನಾಗಿದ್ದೇನೆ."

**ಹೌದು! ಇದು ಎಲ್ಲಾ ಸತ್ತವರ ಪುನರುತ್ಥಾನದ ಮಹಾಸತ್ಯ!**



## "ಪುನರುತ್ಥಾನ" - ಎಂದರೇನು?

ಇದು ಬೇರೆ ಯಾವ ಮತಕ್ಕೂ **ಸ್ವಲ್ಪವೂ ತಿಳಿಯದಿರುವ**
ಸತ್ಯವೇದದ ಬೋಧನೆ.

ಬೌದ್ಧರು ಮತ್ತು ಹಿಂದು ಮತದವರು ಮರಣದ ನಂತರ ಪುನರ್ಜನ್ಮದ ಮೂಲಕ ಜೀವಿಸಲು ಮತ್ತೊಂದು ಅವಕಾಶವಿದೆ ಎಂದು ಹೇಳುತ್ತಾರೆ.

ಮುಸ್ಲಿಮರು ಮತ್ತು ಕ್ರೈಸ್ತರು ಸಹ ಜೀವವು "ಪರದೈಸಿ"ನಲ್ಲಿ ಆತ್ಮೀಕ ಸ್ಥಿತಿಯಲ್ಲಿ ಇರುತ್ತದೆಂದು ಹೇಳುತ್ತಾರೆ.

– ಸತ್ಯವೇದದಲ್ಲಿ **ಪುನರುತ್ಥಾನ**ದ ಬೋಧನೆಯು ಬಹಳ ವ್ಯತ್ಯಾಸವಾಗಿದೆ.

ದೇವರು, ಹೇಗೆ ತನ್ನ ಅಗಾಧ ದೈವೀಕ ಶಕ್ತಿಯನ್ನು ಉಪಯೋಗಿಸಿ, ಸತ್ತು ಸಂಪೂರ್ಣವಾಗಿ ಇಲ್ಲವಾಗಿರುವವರನ್ನು ಜೀವಂತ ಸ್ಥಿತಿಗೆ ತರಲು ಸಮರ್ಥನಾಗಿದ್ದಾನೆ ಎಂದು ಹೇಳುತ್ತದೆ.

ದೇವರ ಬಲ, ಮರಣ ಸಮಯದಲ್ಲಿ ಇದ್ದ ಸಂಪೂರ್ಣ ದೇಹ ಮತ್ತು ಮನಸ್ಸಿನ ಸ್ಥಿತಿಗೆ ಜೀವಿಯನ್ನು ಹಿಂದಿರುಗಿಸುತ್ತದೆ.

## ಇದೊಂದು ನಂಬಲು ಸಾಧ್ಯವಿಲ್ಲದಂತಹ ಅದ್ಭುತ!

**ವಯಸ್ಸಾಗಿ ಸತ್ತ ಜನರು ಅದೇ ವಯಸ್ಸಾದ ಸ್ಥಿತಿಯಲ್ಲಿಯೇ ಪುನರುತ್ಥಾನ ಹೊಂದುವರು.**





**ಯುವಕರು ಯಾವ ಸ್ಥಿತಿಯಲ್ಲಿ ಸತ್ತರೋ ಅದೇ ಸ್ಥಿತಿಯಲ್ಲಿಯೇ ಪುನರುತ್ಥಾನ ಹೊಂದುವರು.**



**ಇದಲ್ಲದೆ, ಕೂಸು ಮತ್ತು ಮಕ್ಕಳು ಸಹ ಯಾವ ಸ್ಥಿತಿಯಲ್ಲಿ ಸತ್ತರೋ ಅದೇ ಕೂಸು ಮತ್ತು ಮಕ್ಕಳ ಸ್ಥಿತಿಯಲ್ಲಿಯೇ ಪುನರುತ್ಥಾನ ಹೊಂದುವರು.**



ಪುನರುತ್ಥಾನ ಎಂಬದು ಗ್ರೀಕ್ ಪದವಾದ "ಅನಸ್ತೇಸಿಸ್" ದಿಂದ ಬಂದಿದೆ ಮತ್ತು (ಸ್ಟ್ರಾಂಗ್ಸ್ – ಗ್ರೀಕ್ # 386) ಅದರ ಅರ್ಥ **"ಮತ್ತೆ ಜೀವಕ್ಕೆ ಬರುವುದು"** **"ಮತ್ತೆ ಮೇಲೇಳುವದು"**

ಆದ್ದರಿಂದ "ಪುನರುತ್ಥಾನ" ಎಂಬುದರ **ನಿಜವಾದ ಅರ್ಥ** ಮಹಾ ಅದ್ಭುತವಾದ ಜೀವಂತ "ಸ್ಥಿತಿಗೆ" ಹಿಂದಿರುಗುವುದು ಅಥವಾ ಮರಣದಿಂದ **ಎಚ್ಚೆತ್ತು ಕೊಳ್ಳುವುದು** ಮಾತ್ರವಲ್ಲ, ಆದರೆ ಇನ್ನೂ ಮುಂದುವರಿದು ಆದಾಮನು ಕಳೆದು ಕೊಂಡ **ಪರಿಪೂರ್ಣ ಸ್ಥಿತಿಗೆ** ಹಿಂದಿರುಗುವುದಾಗಿದೆ.

ಹೌದು! ಪುನರುತ್ಥಾನವು "**ಮರಣದಿಂದ ಎಚ್ಚೆತ್ತುಕೊಳ್ಳುವ**" ಸ್ಥಿತಿಯಿಂದ ಆರಂಭವಾಗುವ ಒಂದು **ಪ್ರಕ್ರಿಯೆ**.

**ಆದ್ದರಿಂದ "ಪುನರುತ್ಥಾನ" ಎಂಬುದರ ನಿಜವಾದ ಅರ್ಥ ಮಹಾ ಅದ್ಭುತವಾದ ಜೀವಂತ "ಸ್ಥಿತಿಗೆ" ಹಿಂದಿರುಗುವುದು ಅಥವಾ ಮರಣದಿಂದ ಎಚ್ಚೆತ್ತು ಕೊಳ್ಳುವುದು ಮಾತ್ರವಲ್ಲ, ಆದರೆ ಆದಾಮನು ಕಳೆದುಕೊಂಡ ಪರಿಪೂರ್ಣ ಸ್ಥಿತಿಗೆ ಕ್ರಮೇಣವಾಗಿ ಹಿಂದಿರುಗುವುದಾಗಿದೆ.**

ಎಲ್ಲರೂ ಮರಣದಿಂದ ಎದ್ದು ಬರುವರು –
ಮತ್ತು ಇದನ್ನು ಯೇಸು ಸ್ಪಷ್ಟವಾಗಿ ಬೋಧಿಸಿರುವದನ್ನು ಸಹ ಕೆಳಗಿನ ವಾಕ್ಯದಲ್ಲಿ ಓದಬಹುದು

**ಯೋಹಾನ 5 : 28**

"ಅದಕ್ಕೆ ಆಶ್ಚರ್ಯಪಡಬೇಡಿರಿ; ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ."

ಇದು ನಿಜವಾಗಿಯೂ **ನಂಬಲು ಸಾಧ್ಯವಿಲ್ಲದ** ಮತ್ತು **ಅದ್ಭುತವಾದ** ವಿಷಯವಾಗಿದೆ!

**ಇದು "ಮರಣದಿಂದ ಎಚ್ಚೆತ್ತು ಕೊಳ್ಳುವ" ಮಹಾದಿನವನ್ನು ಕುರಿತು ಮಾತನಾಡುತ್ತದೆ.**

**ಈ ದಿನವು** "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವ" ದಿನವಾಗಿದೆಯೋ.

ಆ ದಿನವು "ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು" ಎಂಬ ವಾಕ್ಯ ನೆರವೇರುವ ದಿನವಾಗಿರುತ್ತದೆ.

ಈ ಉಪದೇಶವನ್ನು **ಹೊಸ ಒಡಂಬಡಿಕೆ**ಯಲ್ಲಿ ಮಾತ್ರ ಬೋಧಿಸಲಾಗಿಲ್ಲ!
ಇದನ್ನು **ಹಳೆಯ ಒಡಂಬಡಿಕೆ**ಯಲ್ಲೂ ಸಹ ನೋಡಬಹುದು!
ಇದನ್ನು ಕೆಳಗಿನ ವಾಕ್ಯದಲ್ಲಿ ಓದೋಣ!

**ಯೆಶಾಯ 26 : 19**

“ಮೃತರಾದ ನಿನ್ನ ಜನರು ಬದುಕುವರು, ನನ್ನವರ ಹೆಣಗಳು ಜೀವದಿಂದೇಳುವವು
ಮಣ್ಣಿನಲ್ಲಿ ಪವಳಿಸಿರುವವರೇ, ಎಚ್ಚತ್ತು ಹರ್ಷಧ್ವನಿಗೈಯಿರಿ!”

ಹೌದು! ಇದು ಬಹಳ ಸ್ಪಷ್ಟವಾಗಿದೆ! **ಸತ್ತವರು ಧೂಳಿನಿಂದ ಎಚ್ಚೆತ್ತು ಕೊಳ್ಳುತ್ತಾರೆ.**

ಇದನ್ನು ಮತ್ತೆ ನಾವು ಹೀಗೆ ಓದುತ್ತೇವೆ –

**ದಾನಿಯೇಲನು 12 : 2**

“ಧೂಳಿನ ನೆಲದೊಳಗೆ ದೀರ್ಘನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು...”

**ಹೌದು! ಇದು ಬಹಳ ಸ್ಪಷ್ಟವಾಗಿದೆ!!**

**ಆದ್ದರಿಂದ ದೇವರು ಎಲ್ಲಾ ಮನುಷ್ಯರನ್ನು ಮರಣದಿಂದ
“ರಕ್ಷಿಸಲಿದ್ದಾನೆ”!
- ಪುನರುತ್ಥಾನದ ಮೂಲಕ ಎಲ್ಲರನ್ನು ಮರಣದಿಂದ ರಕ್ಷಿಸಲಿದ್ದಾನೆ!**

ಮತ್ತು ದೇವರ ಚಿತ್ತದಲ್ಲಿ **ಮುಂದಿನ ಹಂತವೇನು**?


ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**1 ತಿಮೊಥೆಯನಿಗೆ 2 : 4**

“ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ
ಸೇರಬೇಕೆಂಬದು ಆತನ ಚಿತ್ತವಾಗಿದೆ”

ದೇವರ **ರಕ್ಷಣೆ**ಯ ಕಾರ್ಯವಿಧಾನದಲ್ಲಿ ಇದು **ಎರಡನೆಯ ಹಂತ**ವಾಗಿದೆ.

ಮಾನವಕುಲ**ದವರೆಲ್ಲರೂ** ಪಾಪದಲ್ಲಿ ಸಾಯುತ್ತಾರೆ ಮತ್ತು ಯಾವ
ಸ್ಥಿತಿಯಲ್ಲಿ ಸಾಯುತ್ತಾರೋ

 ಅದೇ ಸ್ಥಿತಿಯಲ್ಲಿ "ಎಚ್ಚೆತ್ತು" "ಜೀವವನ್ನು ಹೊಂದುತ್ತಾರೆ."

ಅದರ ನಂತರ ಅವರು ಪಾಪದಿಂದ **ಬಿಡುಗಡೆ** ಹೊಂದುವರು!

**ಇದು ಹೇಗೆ ಸಾಧ್ಯ?**

ಇದರ **ಉತ್ತರವನ್ನು** ಮುಂದೆ ಓದುತ್ತೇವೆ–

**ಯೋಹಾನ 17 : 17**

“ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು; ನಿನ್ನ ವಾಕ್ಯವೇ ಸತ್ಯವು.”

ಹೌದು! ಹೀಗೆ ಸತ್ಯದ ಮೂಲಕ ಪಾಪದ ಸ್ಥಿತಿ ಮತ್ತು ನಡತೆಯಿಂದ "ಶುದ್ಧೀಕರಿಸಲಾಗುತ್ತದೆ" ಅಥವಾ "ಪವಿತ್ರಗೊಳಿಸಲಾಗುತ್ತದೆ"

**ದೇವರ ವಾಕ್ಯ ಮತ್ತು ಸತ್ಯದ ಜ್ಞಾನ ಹಾಗೂ ಸತ್ಯವಾಕ್ಯಕ್ಕೆ ವಿಧೇಯತೆಯು ಪಾಪದ ಮಾರ್ಗಗಳಿಂದ ನಮ್ಮನ್ನು ಶುದ್ಧೀಕರಿಸುತ್ತದೆ.**

ಉದಾಹರಣೆಗೆ: ಕೆಟ್ಟ ಮಾತು, ಸ್ವಾರ್ಥ, ಮೋಸಮಾಡುವದು, ಸುಳ್ಳು ಹೇಳುವದು ಇತ್ಯಾದಿ. ಆದರೆ ಸತ್ತವರು ಎಲ್ಲಾ "ಎಚ್ಚೆತ್ತ ಮೇಲೆ" **"ಸತ್ಯದ ಜ್ಞಾನವು"** ಇಡೀ ಲೋಕವನ್ನು ವ್ಯಾಪಿಸಬೇಕು!

**ಇದು ಹೇಗೆ ನೆರವೇರುತ್ತದೆ?**

ಕೆಳಗಿನ ವಾಕ್ಯದಲ್ಲಿ ಓದುವಂತೆ ಅದು ನೆರವೇರುತ್ತದೆ–

**ಹಬಕ್ಕೂಕ 2 : 14**

"ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವದು"



ಹೌದು! ಲೋಕವೆಲ್ಲವೂ ದೇವರ ವಾಕ್ಯದ ಜ್ಞಾನದಿಂದ –ಸತ್ಯವೇದದ ಜ್ಞಾನದಿಂದ ತುಂಬಿರುವದು!

ಈ ವಿಷಯವನ್ನು ಕೆಳಗಿನ ವಾಕ್ಯ ಮತ್ತೆ **ಧೃಡಪಡಿಸುತ್ತದೆ** –

ಯೆಶಾಯ 11 : 9

"ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವದು."

ಇದು ಹೇಗೆ ಸಾಧ್ಯವೆಂದು ನೀವು ಕೇಳಬಹುದು?
ಇದರ ಮಾರ್ಗಗಳು ಈ ದಿನ ನಮ್ಮ ಕಣ್ಣು ಮುಂದೆ ಇದೆ!

**ನೀವು ಅದನ್ನು ನೋಡುತಿದ್ಧೀರಾ?**

ಈ ದಿನ ಮಾಹಿತಿ ಮತ್ತು **ಜ್ಞಾನವು** ಪ್ರತಿಯೊಂದು ಮನೆಗೂ ರೇಡಿಯೋ, ಟಿ.ವಿ. ಅಂತರ್ಜಾಲ, ವಿ.ಸಿ.ಡಿ,
ಡಿ.ವಿ.ಡಿ, ಸಿ.ಡಿ, ಇವುಗಳ ಮೂಲಕ ಬಹಳ ವೇಗವಾಗಿ ರವಾನಿಸಲ್ಪಡುತ್ತಿದೆ.

ಪುಸ್ತಕಗಳ ಬದಲು ಆಡಿಯೋ ಮತ್ತು ವಿಡಿಯೋಗಳ ನಿರೂಪಣೆಗಳು ಬಂದಿವೆ.

ಈ ತಂತ್ರ ಜ್ಞಾನವು ಕೇವಲ **70-80** ವರ್ಷಗಳಿಂದ ಇದೆ ಮತ್ತು ಇವು ನಾವು **ಆಶೀರ್ವಾದದ ಸಮಯಕ್ಕೆ** ಎಷ್ಟು ಸಮೀಪವಾಗಿದ್ದೇವೆಂದು ತೋರಿಸುತ್ತದೆ.

ನಿಶ್ಚಯವಾಗಿ ಈ ವಾಕ್ಯವು ಈ ದೊಡ್ಡ ಮತ್ತು ವಿಶಾಲವಾದ ಲೋಕದಲ್ಲಿ ಹೇಗೆ **ನೆರವೇರುತ್ತದೆ** ಎಂಬ ಅರಿವು
**ನಮ್ಮ ಕಣ್ಣು ಮುಂದೆಯೇ** ದಿನೇ ದಿನೇ ಸ್ಪಷ್ಟವಾಗುತ್ತಿದೆ!

ಇದು ಹೇಗೆಂದರೆ ಒಬ್ಬನು ಬೆಳಗ್ಗೆ ಎದ್ದು ತನ್ನ ಮನೆಯಿಂದ ಹೊರಗೆ ಬಂದು ಕ್ಯಾಮರಾ, ಬೆಳಕು, ಜೆನರೇಟರ್ ವ್ಯಾನು, ಕುರ್ಚಿಗಳು ಇತರೆಯನ್ನು ಮುಂತಾದವುಗಳನ್ನು ನೋಡುತ್ತಾನೆ ಆದರೆ ಯಾವ ಜನರೂ ಕಾಣಿಸುವುದಿಲ್ಲ!!

**ಆಗ ಆತನು ಏನೆಂದು ಯೋಚಿಸಬಹುದು?**

ಆಹಾ! ಹೌದು! ಆತನು ಇಲ್ಲಿ ಚಲನ **ಚಿತ್ರೀಕರಣ** ನಡೆಯಲಿದೆ ಎಂದು ಯೋಚಿಸಬಹುದು!

ಆ ಉಪಕರಣಗಳನ್ನು ನೋಡುವಾಗ ಈ ರೀತಿಯಾದ ಊಹೆ ಮತ್ತು **ನಿರ್ಧಾರ** ಬರುತ್ತದೆ.

ಈ ದಿನ ನಾವು ಎಲ್ಲಾ ದಿಗ್ಭ್ರಮೆಗೊಳಿಸುವ ತಂತ್ರಜ್ಞಾನದ ಮೂಲಕ ದೂರದ ಮತ್ತು ವಿಶಾಲವಾದ ಜಗತ್ತಿನ ಮಾಹಿತಿಗಳನ್ನು ಅತಿ ಕಡಿಮೆ ಸಮಯದಲ್ಲಿ ತಿಳಿಯುವಾಗ ಇದೇ ರೀತಿಯಾಗುತ್ತದೆ!

ಹೌದು! ಆ ಸಮಯವು ಹತ್ತಿರವಿದೆ, –

“ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವದು.”

ಮತ್ತು ಆ ಮಹಿಮೆಯ ಸಮಯದ ಬಗ್ಗೆ ಹೀಗೆ ಬರೆದಿದೆ –

**ಯೆರೆಮೀಯ 31:34**

“ನೆರೆಹೊರೆಯವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು – ಯೆಹೋವನ ಜ್ಞಾನವನ್ನು ಪಡೆಯಿರಿ **ಎಂದು** ಇನ್ನು ಮೇಲೆ ಬೋಧಿಸಬೇಕಾಗಿರುವದಿಲ್ಲ ; ಚಿಕ್ಕವರು ಮೊದಲು ಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು. ”

**ಹೌದು! ಆದ್ದರಿಂದ ಎಲ್ಲರೂ ಸತ್ಯದ ಜ್ಞಾನದ ಕಡೆಗೆ ಬಂದು ಅವರ ಪಾಪಗಳಿಂದ ಶುದ್ಧೀಕರಣ ಹೊಂದುವದಕ್ಕೆ ಅವಕಾಶವಿರುತ್ತದೆ.**

ಆದರೆ ಯಾರಾದರು ಹೀಗೆ ಕೇಳಬಹುದು –

"**ಸತ್ತವರು ಮತ್ತು ಜೀವಂತವಾಗಿರುವವರಿಬ್ಬರಿಗೂ ಸ್ಥಳ ಎಲ್ಲಿ ಇದೆ**"?

**ಇದೊಂದು ಒಳ್ಳೆಯ ಪ್ರಶ್ನೆ!**

ಮುಂದಿನ ವಾಕ್ಯದಲ್ಲಿ ಓದುವಂತೆ ಆದಿಯಲ್ಲಿ ದೇವರ ಆಜ್ಞೆಯನ್ನು ನೋಡೋಣ –

**ಆದಿಕಾಂಡ 1:28**

“ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ – ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ....”

ದೇವರು ಆಜ್ಞಾಪಿಸಿದ್ದು ಭೂಮಿಯನ್ನು ತುಂಬಿಕೊಳ್ಳಿರಿ ಎಂದು ಆದರೆ ಮಿತಿಮೀರಿ ತಂಬಿಕೊಳ್ಳಿ ಎಂಬುದಾಗಿ ಅಲ್ಲ.

ಚಿತ್ರಮಂದಿರದಲ್ಲಿ ಟಿಕೆಟ್ಟನ್ನು ಮಾರುವವನಿಗೆ **ಯಾವಾಗ** ಟಿಕೆಟ್ಟನ್ನು ಮಾರುವುದು **ನಿಲ್ಲಿಸಬೇಕು** ಮತ್ತು

ಚಿತ್ರಮುಂದಿರ **ಭರ್ತಿಯಾಗಿದೆ** (HOUSE FULL) ಎಂಬ ಬೋರ್ಡನ್ನು ಯಾವಾಗ ಹಾಕಬೇಕು ಎಂದು ಗೊತ್ತಿದೆ.

**ಇದೇ ರೀತಿ ಪೆಟ್ರೋಲ್ ತುಂಬುವ ಸ್ಟೇಷನ್ನಿನಲ್ಲಿ ಪೆಟ್ರೋಲ್ ಹಾಕುವವನಿಗೆ “ಟ್ಯಾಂಕನ್ನು ತುಂಬಲು” ಆದೇಶಿಸಿದಾಗ ಅವನು ಪೆಟ್ರೋಲ್ ಹೊರಚೆಲ್ಲುವಷ್ಟು ಹಾಕುವನೇ?**

ಹಾಗಿರುವಾಗ ಸರ್ವಶಕ್ತನಾದ ದೇವರಿಗೆ ಈ ಭೂಮಿಯ ಮೇಲೆ ಜನರು ಮಿತಿಮೀರದ ಹಾಗೆ ಯಾವಾಗ ಸಂತಾನೋತ್ಪತ್ತಿಗೆ **ತಡೆಯನ್ನು ತರಬೇಕೆಂದು ಗೊತ್ತಿಲ್ಲವೇ** ?

ಒಬ್ಬ ಬಲಹೀನ ಮತ್ತು ಅಪರಿಪೂರ್ಣನಾದ ಮನುಷ್ಯನಿಗೆ ಅಷ್ಟು ಜ್ಞಾನ ಇರುವಾಗ **ಪರಿಶುದ್ಧನಾದ** ಮತ್ತು **ಸರ್ವಶಕ್ತನಾದ** ದೇವರಿಗೆ ಇನ್ನೂ ಹೆಚ್ಚಾಗಿರುತ್ತದೆ ಅಲ್ಲವೇ?

ಆದಾಮನ ಕುಟುಂಬದ ಜನಸಂಖ್ಯೆಯ ಅಧ್ಯಯನ ಮಾಡಿದಾಗ ನಮಗೆ ತಿಳಿದುಬರುವುದೇನೆಂದರೆ:

**ಈಗಿನ ಲೋಕದ ಜನಸಂಖ್ಯೆಯು - 7.8 ಬಿಲಿಯನ್ (7800,000,000) (780 ಕೋಟಿ)**

**1840 ನೇ ಇಸವಿಯಲ್ಲಿ ಈ ಲೋಕದ ಜನಸಂಖ್ಯೆಯು 1 ಬಿಲಿಯನ್ ( 1,000,000,000)**

ಇದಕ್ಕೂ ಮೊದಲು ಜನಸಂಖ್ಯೆ ಬಹಳ ಕಡಿಮೆ ಇತ್ತು, ಈ ಸಂಖ್ಯೆಯನ್ನು ಮುಟ್ಟಿರಲಿಲ್ಲ.

ಇಡೀ ಆದಾಮನ ಕುಟುಂಬವನ್ನು ಅಂದಾಜು ಮಾಡಿದರೆ **ಜನಸಂಖ್ಯೆಯು**

**25 - 30 ಬಿಲಿಯನ್**

ಒಬ್ಬರು ಗಣಿತ ಶಾಸ್ತ್ರದ ಪ್ರಕಾರ ಈ ಜನ ಸಂಖ್ಯೆಯ **ಎರಡರಷ್ಟು ಲೆಕ್ಕಾಚಾರ** ಮಾಡಿದರೂ ಸಹ

ನಮ್ಮ ಭಾರತ ದೇಶದಲ್ಲೇ ಬೇಕಾದಷ್ಟು **ಪ್ರದೇಶವಿದೆ** ಎಂದು ಕಂಡು ಹಿಡಿಯಬಹುದು!

ಎಲ್ಲಾ ಜನರಿಗೂ ಭಾರತದಲ್ಲೇ!



ನಮ್ಮ ಭಾರತದ ವಿಸ್ತೀರ್ಣ ಸುಮಾರು 24,00,000 ಚದರ ಕಿಲೋಮೀಟರ್

1 ಚದರ ಕಿಲೋಮಿಟರ್ = 10,00,000 ಚದರ ಮೀಟರ್ (1000×1000)

1 ಚದರ ಮೀಟರ್ = 9 ಚದರ ಅಡಿ ಅಥವಾ 3' X 3'

ಭಾರತ ಪ್ರದೇಶವು ಚದರ ಮೀಟರ್‌ನಲ್ಲಿ = 24,00,000×10,00,000

= 2,400,000,000,000 ಚದರ ಮೀ. ಅಥವಾ 2.4 ಟ್ರಿಲಿಯನ್ ಚದರ ಮೀಟರ್

**ಪ್ರತಿಯೊಬ್ಬನಿಗೂ ಎಷ್ಟು ಪ್ರದೇಶ (ಜಾಗ) ಸಿಗುತ್ತದೆ?**

ಇದನ್ನು ಲೆಕ್ಕಾಚಾರ ಮಾಡಿ ವಿಭಾಗಿಸಿ ನೋಡೋಣ.....

$$= \frac{2{,}400{,}000{,}000{,}000}{78{,}000{,}000{,}000}$$

**ಒಬ್ಬ ವ್ಯಕ್ತಿಗೆ 30 ಚದರ ಮೀಟರ್**
**ಅಥವಾ ಒಬ್ಬ ವ್ಯಕ್ತಿಗೆ 6 ಮೀಟರ್ (18 ಅಡಿ)**
**X 5 ಮೀಟರ್ (15 ಅಡಿ)**



ಎಲ್ಲಾ ಜನರನ್ನು ತುಂಬಲು ಈ ಲೋಕವು ಬಹು ದೊಡ್ಡದಾಗಿದೆ ಮತ್ತು ಈ ಭೂಮಿಯ ಸುಂದರವಾದ ಭೂಪ್ರದೇಶವನ್ನು ಬೆಟ್ಟ, ಮೈದಾನ, ಸರೋವರ, ಮತ್ತು ಕಾಡು ಇತ್ಯಾದಿಗಳಿಂದ ತುಂಬಿಸಿ ಖಂಡಿತವಾಗಿಯೂ ದೇವರು ಎಲ್ಲವನ್ನೂ ಚೆನ್ನಾಗಿ ಯೋಜಿಸಿದ್ದಾರೆ.

**ಮರಣಹೊಂದಿರುವ ಎಲ್ಲಾ ಮನುಷ್ಯರನ್ನು ಜೀವ ಹೊಂದಲು ಎಚ್ಚೆತ್ತು ಕೊಳ್ಳುವುದು ಖಂಡಿತವಾಗಿಯೂ ಸಾಧ್ಯವಿದೆ ಮತ್ತು ದೇವರು ಅದನ್ನು ಬಹಳ ಚೆನ್ನಾಗಿ ಯೋಜಿಸಿದ್ದಾನೆ!**

ಈಗ ಸಾಮಾನ್ಯವಾಗಿ ಮತ್ತು ಬಹಳ ತಪ್ಪಾಗಿ ತಿಳಿದುಕೊಂಡಿರುವ ವಾಕ್ಯವನ್ನು ನೋಡೋಣ –

## ಯೋಹಾನ 5:29

"ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು"

( NIV = "ಖಂಡನೆ" )

ಕೆಟ್ಟದ್ದನ್ನು ಮಾಡಿದವರಾದ ಲೋಕದ ಸತ್ತವರಿಗೆ ಪುನರುತ್ಥಾನ ಮಾಡುವುದು **ಅಥವಾ ಅವರನ್ನು ಜೀವಕ್ಕಾಗಿ ಎಚ್ಚರ ಪಡಿಸುವುದು ನಿಂದಿಸುವುದಕ್ಕೆ ಅಥವಾ ಖಂಡಿಸುವದಕ್ಕೆ ಮಾತ್ರವೇ ?**

**ಯೇಸುವಿನ ಮರಣವು ಬಡಲೋಕಕ್ಕೆ ಯಾವ ನಿರೀಕ್ಷೆಯನ್ನು ಕೊಡುವುದಿಲ್ಲವೇ ?**

**ಇದು ನಿಜವೇ?**

ಇದನ್ನು ಕುರಿತು ಮುಂದೆ ಓದಿ ನೋಡೋಣ –

## ಯೋಹಾನ 3:17

" ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪುಮಾಡುವದಕ್ಕಾಗಿ ಕಳುಹಿಸಲಿಲ್ಲ "

**ಇದನ್ನು ನೀವು ನೋಡಿದಿರಾ ?**

ಹೌದು! ಇಡೀ ಲೋಕವು **ಮೊದಲೇ** ಮರಣದ **ದಂಡನೆಗೆ** ಗುರಿಯಾಗಿದೆ ಮತ್ತು ದೇವರು ತನ್ನ ಮಗನನ್ನು ಆ ದಂಡನೆಯಿಂದ **ರಕ್ಷಿಸಲು** ಕಳುಹಿಸಿದನು ಹೊರತು **ಮೊದಲೇ ದಂಡನೆಗೆ** ಒಳಗಾದ ಲೋಕವನ್ನು ಮತ್ತೆ ಖಂಡಿಸಲು ಕಳುಹಿಸಲಿಲ್ಲ!!



**ಈ ಲೋಕದ ಮೇಲಿರುವ ಆ ದಂಡನೆ– ಎಲ್ಲಾ ವಿಧವಾದ ಕಷ್ಟಾನುಭವ ಮತ್ತು ದುಃಖ ತುಂಬಿರುವ ಮರಣದ ದಂಡನೆ.**

ಆದ್ದರಿಂದ, ಈ ಸಂಗತಿಯನ್ನು ನೋಡಿರುವುದರಿಂದ, ನಾವು ಯೋಹಾನ **5:29**ನೆ ವಾಕ್ಯವನ್ನು ಮತ್ತೆ ಓದೋಣ ಮತ್ತು ಅದರಲ್ಲಿರುವ "ಡ್ಯಾಮ್ನೇಷನ್" (ಕೆ.ಜೆ.ವಿ) ಮತ್ತು "ಕಂಡೆಮ್ಡ್" (ಎನ್.ಐ.ವಿ) ಎಂಬ ಪದವು ಗ್ರೀಕ್ ಬಾಷೆಯ ಕ್ರೈಸಿಸ್ (**KRISES**) ಎಂಬ ಪದದ ಬಾಷಾಂತರವಾಗಿದ್ದು ಇದು ಆಂಗ್ಲ ಪದ **crisis** ಎಂಬ ಅರ್ಥ ಕೊಡುತ್ತದೆ.

ಅದರ ಅರ್ಥ "ನ್ಯಾಯ ತೀರ್ಪಿನ ಸಮಯ" ಅಥವಾ "ತುರ್ತುಪರಿಸ್ಥಿತಿ" **ಉದಾಹರಣೆಗೆ:** ಆಸ್ಪತ್ರೆಯಲ್ಲಿನ ಐ.ಸಿ.ಯು (**ICU**) ಅಂದರೆ ತುರ್ತು ನಿಗಾ ಘಟಕದಲ್ಲಿ ಅಪಾಯ ಸ್ಥಿತಿಯಲ್ಲಿರುವ ವ್ಯಕ್ತಿಯು (ಕ್ರೈಸಿಸ್) ವಿಷಮ ಸ್ಥಿತಿಯಲ್ಲಿ ಇದ್ದಾನೆ ಎಂದರ್ಥ.

ಅಂದರೆ ಅವನ ಸ್ಥಿತಿಯು ಸಾವು ಬದುಕಿನ ನಡುವಿದೆ ಎಂದರ್ಥ. ಅದೇ ರೀತಿ, ಕೆಟ್ಟತನ ಮಾಡಿರುವ ಲೋಕದ ಮಾನವಕುಲವು "ನ್ಯಾಯತೀರ್ಪಿಗೆ" ಅಥವಾ "ವಿಷಮ ಪರಿಸ್ಥಿತಿಗೆ" ಎಬ್ಬಿಸಲ್ಪಡುವುದು.

**ಹೌದು! ಅದುವೇ ಈ ಲೋಕದ ನ್ಯಾಯ ತೀರ್ಪಿನ ದಿನವಾಗಿದೆ!**

ಮತ್ತು ಆ "ನ್ಯಾಯತೀರ್ಪಿನ ದಿನ" ವನ್ನು ಕುರಿತು ಏನು ಓದುತ್ತೇವೆ? ಕೆಳಗಿನ ವಾಕ್ಯ ಓದೋಣ

**ಅಪೊಸ್ತಲರ ಕೃತ್ಯಗಳು 17:31**

**"ಯಾಕಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ"**

ಹೌದು! ನ್ಯಾಯ ತೀರ್ಪಿಗೆ ಒಂದು **ದಿನವಿದೆ** ಮತ್ತು ಒಬ್ಬ **ನ್ಯಾಯಾಧಿಪತಿಯು** ನೇಮಕವಾಗಿದ್ದಾನೆ ಅದು

➡ **ಕರ್ತನಾದ ಯೇಸುಕ್ರಿಸ್ತನು.**

– ಇಡೀ ಲೋಕದ **ರಕ್ಷಣೆಗಾಗಿ** ತನ್ನನ್ನೇ ತಾನೇ ಸ್ವಂತ ಇಚ್ಛೆಯಿಂದ **ತ್ಯಾಗಮಾಡಿದವನು!**



**ಮತ್ತು ಈ ನ್ಯಾಯತೀರ್ಪಿನ "ದಿನ"ವು 24 ಗಂಟೆಗಳ ಕಾಲಾಧಿಯನ್ನು ಸೂಚಿಸುತ್ತದೆಯೇ?**

ಕೆಳಗಿನ ವಾಕ್ಯ ಓದೋಣ–

## 2 ಪೇತ್ರನು 3:8

**"ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬದನ್ನು ಮಾತ್ರ ಮರೆಯಬೇಡಿರಿ."**

ಹೌದು! ಒಂದು ದಿನವು ಕರ್ತನಾದ ಯೇಸುವಿಗೆ **24** ಗಂಟೆಗಳಲ್ಲ ಆದರೆ ಸಾವಿರ ವರ್ಷಗಳು.

**ಆದ್ದರಿಂದ "ನ್ಯಾಯ ತೀರ್ಪಿನ ಒಂದು ದಿನ" = 1000 ವರ್ಷಗಳು.**

**(ಮುಂದಿನ ತರಗತಿಗಳಲ್ಲಿ ಇದರ ವಿಷಯವನ್ನು ವಿವರವಾಗಿ ಅಭ್ಯಾಸ ಮಾಡೋಣ)**

ಯಾರಾದರು ಹೀಗೆ ಕೇಳಬಹುದು –

ಈ **ನ್ಯಾಯ ತೀರ್ಪಿನ ದಿನವು ಹೇಗಿರುತ್ತದೆ**?

ಇದನ್ನು ಕುರಿತು ಓದಿ ನೋಡೋಣ –

## ದಾನಿಯೇಲನು 12:2

**"ಧೂಳಿನ ನೆಲದೊಳಗೆ ದೀರ್ಘನಿದ್ರೆಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನ ನಿತ್ಯತಿರಸ್ಕಾರಗಳನ್ನು ಅನುಭವಿಸುವರು."**

**ಇದೇನಿದು ?**

ಇಲ್ಲಿ ಮೊದಲು **"ನಿತ್ಯ"** ಎಂಬ ಪದವು ತಪ್ಪಾಗಿ ಭಾಷಾಂತರಿಸಲ್ಪಟ್ಟಿದೆ. ಇದಕ್ಕೆ ಇಬ್ರಿಯ ಪದವು "**OLAM**" "ಒಲಮ್" ಮತ್ತು ಇದರ ಅರ್ಥ "ಯುಗದ ಅಂತ್ಯದವರೆಗೂ" ಅಂದರೆ ಒಂದು ಕಾಲಾವಧಿಯನ್ನು ಸೂಚಿಸುತ್ತದೆ ಮತ್ತು **ನಿತ್ಯವನ್ನಲ್ಲ**!

ಈ "ತಿರಸ್ಕಾರ"ವು ಎಲ್ಲಾ ಜನರ ಹಗರಣ, **ಭ್ರಷ್ಟಾಚಾರ,** ಮತ್ತು ವಂಚನೆ ವಂಚನೆಯನ್ನು ಸೂಚಿಸುತ್ತದೆ. ಇವುಗಳ ಬಗ್ಗೆ ಮುಂದಿನ ಕಾಲದಲ್ಲಿ **ಎಲ್ಲರಿಗೂ ಸಂಪೂರ್ಣವಾಗಿ ಗೊತ್ತಾಗುತ್ತದೆ.**

ಇದನ್ನು ಕುರಿತು ಮುಂದಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ –

## ಲೂಕನು 12 : 2,3 / ಪ್ರಸಂಗಿ 12 : 14

"ಮರೆಯಾಗಿರುವ ಯಾವದೂ ವ್ಯಕ್ತವಾಗದೆ ಇರುವದಿಲ್ಲ ಹೊರ ಪಡದ ರಹಸ್ಯವೂ ಇಲ್ಲ. ಹೀಗಿರುವದರಿಂದ ನೀವು ಕತ್ತಲಲ್ಲಿ ಹೇಳಿದಂಥದು ಬೆಳಕಿನಲ್ಲಿ ಕೇಳಲಾಗುವದು; ಮತ್ತು ನೀವು ಕೋಣೆಗಳೊಳಗೆ ಕಿವಿಮಾತು ಆಡಿದ್ದು ಮಾಳಿಗೆಗಳ ಮೇಲೆ ಸಾರಲಾಗುವದು."

"ಒಳ್ಳೇದಾಗಲಿ ಕೆಟ್ಟದಾಗಲಿ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು."

**ನಿಜವಾಗಿಯೂ! ಈ ನ್ಯಾಯತೀರ್ಪಿನ "ದಿನವು" ಎಂತಹ "ದಿನ"ವಾಗಿರುತ್ತದೆ!**

ಪ್ರತಿಯೊಬ್ಬರ, ಕುಟುಂಬದ ಮತ್ತು ದೇಶದ ಭ್ರಷ್ಟಾಚಾರದ ರಹಸ್ಯವನ್ನು ಸ್ವಲ್ಪ ಊಹಿಸಿ ನೋಡಿ!!

ಈಗ ಕರ್ತನಾದ ಯೇಸುವಿನ **ಈಡುಬಲಿಯ** ಇನ್ನೊಂದು ದೃಶ್ಯವನ್ನು ನೋಡೋಣ –

## ಗಲಾತ್ಯದವರಿಗೆ 4:4

"ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು .......... ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು."

ಹೌದು! ಯೇಸು ಒಬ್ಬ **ಯೆಹೂದ್ಯನಾಗಿ** ಮತ್ತು **ಧರ್ಮಶಾಸ್ತ್ರಾಧೀನನಾಗಿ "ಹುಟ್ಟಿದನು"**!

ನಿಜವಾಗಿಯೂ ಯೇಸು ಮಾತ್ರವೇ ಧರ್ಮಶಾಸ್ತ್ರವನ್ನು **ಪರಿಪೂರ್ಣವಾಗಿ ಕೈಗೊಂಡನು ಮತ್ತು ಅದರ ಬಹುಮಾನವನ್ನು ಪಡೆದನು.**

ಇದನ್ನು ಕುರಿತು ಹೀಗೆ ಓದುತ್ತೇವೆ–

## ಯಾಜಕಕಾಂಡ 18:5 / ಗಲಾತ್ಯದವರಿಗೆ 3:12

"ನನ್ನ ಆಜ್ಞಾವಿಧಿಗಳ ಪ್ರಕಾರ ನಡೆದು ಕೊಳ್ಳುವವರು ಆ ಆಜ್ಞಾವಿಧಿಗಳ ಮೂಲಕ ಬದುಕುವರು ಆದ್ದರಿಂದ ನೀವು ಅವುಗಳನ್ನೇ ಅನುಸರಿಸಬೇಕು; ನಾನು ಯೆಹೋವನು. "

“ಆದರೆ ಕರ್ಮಮಾರ್ಗಕ್ಕೆ ನಂಬಿಕೆಯು ಆಧಾರವಲ್ಲ, ಅದರ ನೇಮಗಳನ್ನು ಆಚರಿಸಿದವನೇ ಅವುಗಳ ಮೂಲಕ ಬದುಕುವನು ಎಂದು ಬರೆದದೆ”

**ಹೌದು! ಆತನು ವಾಗ್ದಾನ ಮಾಡಲಾಗಿದ್ದ ನಿತ್ಯವಾದ ಮನುಷ್ಯನ ಜೀವದ ಅಧಿಕಾರವನ್ನು ಸಂಪಾದಿಸಿ ಕೊಂಡನು.**



**ಮತ್ತು ಆತನು ಅದನ್ನು ಏನು ಮಾಡಿದನು?**

ಇದರ ಉತ್ತರವನ್ನು ಮುಂದೆ ಓದುತ್ತೇವೆ-

**ಯೋಹಾನ 6:51**

“ಪರಲೋಕದಿಂದ ಇಳಿದು ಬರುವ ಜೀವವುಳ್ಳ ರೊಟ್ಟಿಯು ನಾನೇ; ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು ಎಂದು ಹೇಳಿದನು”

ಹೌದು! ಈ “**ಲೋಕದ ಜೀವಕ್ಕಾಗಿ**” ಆತನು ಸಂಪಾದಿಸಿಕೊಂಡಿದ್ದ **ಜೀವಿಸುವ ಅಧಿಕಾರವನ್ನು** ತ್ಯಾಗಮಾಡಿದನು ಆದ್ದರಿಂದಲೇ ಕೆಳಗಿನ ವಾಕ್ಯದಲ್ಲಿ ವಿವರಿಸಿರುವಂತೆ ಯೇಸು ಈಡುಬಲಿಯಾಗಿ ತನ್ನನ್ನು ಒಪ್ಪಿಸಿಕೊಟ್ಟನು–

**1 ತಿಮೊಥೆಯನಿಗೆ 2:5,6**

“ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು.”

ಹೌದು! ಯೇಸು **ಎಂದಿಗೂ ಆತ್ಮೀಕ ಜೀವಿಯಾಗಿ** ತನ್ನ ಜೀವದ ಅಧಿಕಾರವನ್ನು ತ್ಯಾಗ **ಮಾಡಲಿಲ್ಲ** ಆದರೆ ಮನುಷ್ಯನಾಗಿ – ಮನುಷ್ಯನಾದ ಯೇಸು ಕ್ರಿಸ್ತನನ್ನು ತ್ಯಾಗಮಾಡಿದನು.

ಇದು ಹೇಗೆಂದರೆ, ಒಬ್ಬನಿಗೆ ಲಂಡನ್ ಮತ್ತು ನ್ಯೂಯಾರ್ಕ್‌ನಲ್ಲಿ **2** ಮನೆಗಳಿದ್ದು ಅದರಲ್ಲಿ ಆತ ಒಂದನ್ನು ಮಾರಿಬಿಟ್ಟರೆ ಅಥವಾ ಮತ್ತೊಬ್ಬರಿಗೆ ಕೊಟ್ಟರೆ ಅದನ್ನು ಹೇಗೆ ಮತ್ತೆ ಪಡೆದುಕೊಳ್ಳಲಾಗುವುದಿಲ್ಲವೋ, ಅದೇ ರೀತಿ ಯೇಸುವಿಗಾಯಿತು!

ಆತನಿಗೆ **ಪರಲೋಕ** ಜೀವಿತದ **ಅಧಿಕಾರ ಮತ್ತು ಭೂಲೋಕ** ಜೀವಿತದ ಅಧಿಕಾರವಿತ್ತು!

ಮತ್ತು ಆತನು ತನ್ನ **ಭೂಲೋಕ** ಜೀವಿತದ ಅಧಿಕಾರವನ್ನು ತ್ಯಾಗಮಾಡಿದನು ಮತ್ತೆ ಎಂದಿಗೂ ಅದನ್ನು ತಿರಿಗಿ ಪಡೆಯಲಾಗುವುದಿಲ್ಲ!

ಈಗ ಕರ್ತನಾದ ಯೇಸು **ಇನ್ನೆಂದಿಗೂ** ಮನುಷ್ಯನಲ್ಲ ಆದರೆ "ಆತ್ಮೀಕ ಜೀವಿ" ಅಥವಾ "ಪರಲೋಕ ಜೀವಿ" ಯೆಂದು ಮುಂದಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ–

### 1 ಪೇತ್ರ 3:18

**"ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವದಕ್ಕಾಗಿ ಒಂದೇ ಸಾರಿ ಪಾಪ ನಿವಾರಣಕ್ಕೋಸ್ಕರ ಬಾಧೆಪಟ್ಟು ಸತ್ತನು."**

ಹೌದು! ಕರ್ತನಾದ ಯೇಸು ತನ್ನ ಪರಿಪೂರ್ಣ ಮನುಷ್ಯ ಜೀವವನ್ನು **ತ್ಯಾಗ** ಮಾಡಿದನು ಮತ್ತು ತನ್ನ **ಜೀವದ ಅಧಿಕಾರವ**ನ್ನು ಆದಾಮನಿಗೆ **ಈಡುಬಲಿ**ಯಾಗಿ ಕೊಟ್ಟು ಆತ್ಮೀಕ ಜೀವಿಯಾದನು. (2 ಕೊರಿಂಥದವರಿಗೆ 5:16)

ಆದ್ದರಿಂದ ಕರ್ತನು ತನ್ನನ್ನು ಈ ಲೋಕವು **ನೋಡುವುದಿಲ್ಲ** ಎಂದು ದೃಢಪಡಿಸುತ್ತಾನೆ. ಏಕೆಂದರೆ ಆತನು ಇನ್ನು ಮಾಂಸದಲಿಲ್ಲ! ಇದನ್ನು ಮತ್ತೆ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

### ಯೋಹಾನ 14:19

**"ಇನ್ನು ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ.."**

**ಹೌದು! ಇದು ಸ್ಪಷ್ಟವಾಗಿದೆಯಲ್ಲವೇ?**

ಕೊನೆಯದಾಗಿ ನಮ್ಮ ಕರ್ತನಾದ ಯೇಸುವಿನ ಮತ್ತು ಆತನ **ಈಡುಬಲಿ**ಯನ್ನು ಕುರಿತು ಇನ್ನೊಂದು ವಿಷಯವನ್ನು ಮುಂದೆ ಓದುತ್ತೇವೆ–

## ಯೆಶಾಯ 53:10

"....ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತಯಜ್ಞಕ್ಕಾಗಿ ಒಪ್ಪಿಸಿದ ಮೇಲೆ ತನ್ನ ಸಂತಾನವನ್ನು ನೋಡುವನು, ಚಿರಂಜೀವಿಯಾಗುವನು,...."

**ಇದರ ಅರ್ಥವೇನು**? ಇದು **ಯೇಸುವಿನ ಮಕ್ಕಳನ್ನು** ಕುರಿತು ಹೇಳುತ್ತದೆ!

ಹೌದು! ಯೇಸು ಮದುವೆ **ಮಾಡಿಕೊಳ್ಳಬಹುದಿತ್ತು** ಇಬ್ರಿಯ **13:4**ರಲ್ಲಿ ಓದುವಂತೆ ಇದು ತಪ್ಪು ಅಥವಾ ಪಾಪವಲ್ಲ. **ಒಂದು ಕಾದಂಬರಿಯಲ್ಲಿ** ಯೇಸು ಮಗ್ಧಳದ ಮರಿಯಳನ್ನು ಮಾದುವೆಯಾಗಿದ್ದರೆಂದು ಬರೆದು ಪ್ರಕಟ ಮಾಡಲಾಗಿದೆ.
ಈ ಪುಸ್ತಕದ ಹೆಸರು–

## "ದಿ ಡಾ ವಿನ್ಸಿ ಕೋಡ್" (THE DA VINCI CODE)

## ಇದು ನಿಜವೇ?

ಒಳ್ಳೆಯದು, ಯೇಸು ಮದುವೆಯಾಗಬಹುದಿತ್ತು!
**ಅದು ತಪ್ಪಲ್ಲ.**

ಆದರೆ, ಇಲ್ಲಿ ಒಂದು ಮುಖ್ಯವಾದ **ವಿಷಯವನ್ನು ಗಮನಿಸಬೇಕಾಗಿದೆ!**

**ಹಾಗೆ ಆತನು ಮದುವೆಯಾಗಿದ್ದರೆ, ಆತನು ಪರಿಪೂರ್ಣ ಜನಾಂಗವನ್ನು ಹುಟ್ಟಿಸಬಹುದಿತ್ತು.**

(ಒಂದು ಜೀವವು ಮತ್ತು ಅದರ ಸ್ವಭಾವವು ತಂದೆಯಿಂದ ಬರುತ್ತದೆ. ತಾಯಿಂ**ದಲ್ಲ ವೈದ್ಯ**ರನ್ನು ಕೇಳಿ ತಿಳಿದುಕೊಳ್ಳಿರಿ)

ಆದರೆ ಯೇಸು ಅದನ್ನು ಆಯ್ಕೆ ಮಾಡಿಕೊಳ್ಳದೆ ಅದರ ಬದಲಾಗಿ ಆದಾಮನ **ಜನಾಂಗವನ್ನು** ತನ್ನ "ಸಂತಾನವಾಗಿ" ಆರಿಸಿಕೊಂಡನು ಮತ್ತು ಪುನರುತ್ಥಾನ ಕಾಲದಲ್ಲಿ ಆತನು "**ನಿತ್ಯನಾದ ತಂದೆ**" ಯಾಗುವನು (ಯೆಶಾಯ **9:6**)

ಆದ್ದರಿಂದಲೇ ಯೆಶಾಯನು **53:10**ರಲ್ಲಿ ಹೀಗೆ ಓದುತ್ತೇವೆ

"....ಆತನು ತನ್ನ ಸಂತಾನವನ್ನು ನೋಡುವನು..."


## ನಿಜವಾಗಿಯೂ ಆತ ಎಂತಹ ಅದ್ಭುತವಾದ ರಕ್ಷಕ!


ಬೇಗನೆ ಭೂಮಿಯು ಆತನ ಮಹಿಮೆಯಿಂದ ತುಂಬುವದು,
ಇದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

**ಫಿಲಿಪ್ಪಿಯವರಿಗೆ 2:9-10**

**“ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು.”**

ಹೌದು! ತಕ್ಕ ಸಮಯದಲ್ಲಿ ಮರಣದಿಂದ ಪುನರುತ್ಥಾನಗೊಳಿಸುವ ಮೂಲಕ ಎಲ್ಲರನ್ನು ಜೀವಿತರನ್ನಾಗಿಸಿ, ಅವರೆಲ್ಲರಿಗೂ ಈ ಮಹಾ ಸತ್ಯಗಳನ್ನು ಹೇಳಿದಾಗ ಎಲ್ಲರೂ ಕರ್ತನ ಮಹಾ ಪ್ರೀತಿ ಮತ್ತು ಆತನ ತ್ಯಾಗಕ್ಕೆ ಆತನನ್ನು ಸ್ತುತಿಸುತ್ತಾರೆ. ಆತನ ಪರಿಶುದ್ಧ ನಾಮವನ್ನು ಆರಾಧಿಸುತ್ತಾರೆ!






For Private Circulation Only

NOT FOR SALE

**Jesus Loves** *Ministry*

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

YouTube SUBSCRIBE TO OUR CHANNEL

Available Languages : Kannada, English, Hindi, Tamil and Telugu